ಕರ್ನಾಟಕ ವಿಧಾನ ಸಭೆ

ಸೋಮವಾರ 26ನೇ ನವೆಂಬರ್ 1990 ಮಾರ್ಗಶಿರ ೫, ೧೯೧೨ ಶಕ

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ 11–00 ಗಂಟೆಗೆ ಸಮಾವೇಶಗೊಂಡಿತು

[ಅಧ್ಯಕ್ಷರು (ಶ್ರೀ ಎಸ್.ಎಂ. ಕೃಷ್ಣ) ಪೀಠವನ್ನು ಅಲಂಕರಿಸಿದರು.]

ಚುಕ್ಕೆ ಗುರ್ತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

SRI R. V. DESHPANDE: Mr. Speaker, Sir, it is a very important question. I HAD ALSO PUT the question. Last Monday though it came, because the House adjourned it lapsed. It is a question pertaining to poor people. If you permit me I will just ask.

Mr. SPEAKER: I will look into it. ಶ್ರೀ ಶಿವಾನಂದ ಕೌಜಲಗಿಯವರೇ, ನಿಮ್ಮ ಕಂದಾಯ ಇಲಾಖೆಗೆ ವರ್ಗಾವಣೆ ಆಗಿದೆ.

ಶ್ರೀ ಶಿವಾನಂದ ಹೆಚ್. ಕೌಜಲಗಿ:– ಇದೇಕೆ ವರ್ಗಾವಣೆ ಆಗಿದೆ. ಇವರೇ ಉತ್ತರ ಹೇಳಬಹುದು.

ಶ್ರೀ ಬಿ. ಬಸವಲಿಂಗಪ್ಪ (ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಮತ್ತು ಪಶುಸಂಗೋಪನೆ ಮಂತ್ರಿ):– ಅದು ಸ್ಕೇರ್‌ಸಿಟಿಗೆ ಸಂಬಂಧಪಟ್ಟ ಪ್ರಶ್ನೆ ಅಲ್ಲವೇ?

ಶ್ರೀ ಶಿವಾನಂದ ಹೆಚ್. ಕೌಜಲಗಿ:– ಅಲ್ಲ, ಅಲ್ಲಿ ರಸ್ತೆ ಹಾಳಾಗಿದೆ, ಮಾಡಿಸುತ್ತೇನೆ ಎಂದು ಹೇಳಿಬಿಡಿ ಸಾಕು.

ಶ್ರೀ ಬಿ. ಬಸವಲಿಂಗಪ್ಪ : ಇದು ಸಾಮಾನ್ಯವಾದ ಪ್ರಶ್ನೆ. ಅದನ್ನು ರಿಪೇರಿ ಮಾಡಿಸುತ್ತೇನೆ.

ಗೇರುಬೀಜ ಅಭಿವೃದ್ಧಿ ನಿಗಮದಿಂದ ಸ್ಥಾಪಿತವಾದ ಫೆನ್ನಿ ಫ್ಯಾಕ್ಟರಿಗೆ ಖರ್ಚಾಗಿರುವ ಹಣ

294. ಶ್ರೀ ಜಿ. ಎಸ್. ಆಚಾರ್ (ಬೈಂದೂರು):– ಮಾನ್ಯ ಅರಣ್ಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ಗೇರು ಅಭಿವೃದ್ಧಿ ನಿಗಮದಿಂದ ದಕ್ಷಿಣ ಕನ್ನಡ ಜಿಲ್ಲೆಯ ಗುಜ್ಜಾಡಿಯಲ್ಲಿ ಸ್ಥಾಪಿತವಾದ ಫೆನ್ನಿ ಫ್ಯಾಕ್ಟರಿಗೆ ಈತನಕ ಖರ್ಚಾಗಿರುವ ಹಣವೆಷ್ಟು ?

ಆ) ಅಲ್ಲಿ ಈತನಕ ಉತ್ಪಾದಿಸಲ್ಪಟ್ಟ ಫೆನ್ನಿ ಹಾಗೂ ಅದರ ಮೌಲ್ಯವೆಷ್ಟು ?

ಇ) ಮಾರಾಟವಾದ ಫೆನ್ನಿ ಮತ್ತು ಅದರ ಮೌಲ್ಯವೆಷ್ಟು ?

ಈ) ಶೀಘ್ರ ಮಾರಾಟಕ್ಕೆ ಮತ್ತು ಲಾಭದಾಯಕ ಉತ್ಪಾದನೆಗೆ ಯೋಜನೆಗಳೇನು ?

ಶ್ರೀ ಇ. ಟಿ. ಶಂಭುನಾಥ್ (ಅರಣ್ಯ ರಾಜ್ಯ ಸಚಿವರು):–

ಅ) ಕರ್ನಾಟಕ ಗೇರು ಅಭಿವೃದ್ಧಿ ನಿಗಮವು ಗುಜ್ಜಾಡಿಯಲ್ಲಿ ಸ್ಥಾಪಿಸಿರುವ ಫೆನ್ನಿ ಫ್ಯಾಕ್ಟರಿಗಾಗಿ ಈ ಕೆಳಕಂಡ ಮೊತ್ತವನ್ನು ವೆಚ್ಚ ಮಾಡಲಾಗಿದೆ.

1.	ಬಂಡವಾಳ ಹೂಡಿಕೆ	38,31,923–40
2.	ಆಡಳಿತ ಬಂಡವಾಳ	7,52,470–64
3.	31–3–91ರ ಅವಧಿಯ ಅಂದಾಜು ವೆಚ್ಚ	2,55,610–50
	ಒಟ್ಟು	48,40,004–54

ಆ) ನಿಗಮವು ಉತ್ಪಾದಿಸಿರುವ ಫೆನ್ನಿ 31,000 ಲೀಟರ್ ಮತ್ತು ಇದರ ಅಂದಾಜು ಮೌಲ್ಯ 11,19,444–00.

ಇ) ಇದುವರೆಗಿನತನಕ ಮಾರಾಟವಾಗಿರುವುದಿಲ್ಲ.

ಈ) ನಿಗಮವು ಉತ್ಪಾದಿಸಿರುವ ಫೆನ್ನಿ ಶೀಘ್ರ ಮಾರಾಟಕ್ಕಾಗಿ ರಾಜ್ಯ ಸರ್ಕಾರದ ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ ಹಾಗೂ ಇತರ ರಖಂ ಫೆನ್ನಿ ಖರೀದಿಸುವವರನ್ನು ಸ್ಪಂದಿಸಿ ಏರ್ಪಾಡುಗಳನ್ನು ಮಾಡಲಾಗುತ್ತಿದೆ. ಲಾಭದಾಯಕ ಉತ್ಪಾದನೆ ಗುರಿಯಲ್ಲಿ ತಯಾರು ಮಾಡಲು ಯೋಜನೆಗಳು ಹಮ್ಮಿಕೊಳ್ಳಲಾಗಿದೆ.

ಶ್ರೀ ಪಿ. ಬಸವರಾಜ್ (ಶ್ರೀ. ಎಸ್. ಆಚಾರ್ ಪರವಾಗಿ): – ಮಾನ್ಯ ಅಧ್ಯಕ್ಷರೇ, ಕರ್ನಾಟಕ ಗೇರು ಅಭಿವೃದ್ಧಿ ನಿಗಮದಿಂದ ದಕ್ಷಿಣ ಕನ್ನಡ ಜಿಲ್ಲೆಯ ಗುಜ್ಡಾಯಲ್ಲಿ ಸ್ಥಾಪಿತವಾದ ಫೆನ್ನಿ ಫ್ಯಾಕ್ಟರಿಗೆ ಈತನಕ ಖರ್ಚಾಗಿರುವ ಹಣವೆಷ್ಟು ಎಂದು ಕೇಳಿದ್ದಕ್ಕೆ ಉತ್ತರವನ್ನು ಒದಗಿಸಿ ಸುಮಾರು ರೂ. 48,40,004–54 ಪೈಸೆ ಎಂದು ಹೇಳಿದ್ದಾರೆ. ಈ ಕಾರ್ಖಾನೆಗೆ ಇಷ್ಟು ಹಣವನ್ನು ಖರ್ಚು ಮಾಡಿ ಸ್ಥಾಪನೆಯನ್ನು ಮಾಡಿದ್ದಾರೆ. ಇಷ್ಟು ಬಂಡವಾಳ ಹಾಕಿ ಉತ್ಪತ್ತಿ ಮಾಡಿದ ಫೆನ್ನಿ ಕೇವಲ 31,000 ಲೀಟರ್. ಇಷ್ಟು ಕಡಿಮೆ ಉತ್ಪಾದನೆ ಆಗುವುದಕ್ಕೆ ಕಾರಣ ಏನು ಎಂದು ಮಾನ್ಯ ಮಂತ್ರಿಗಳು ಹೇಳುತ್ತಾರೆಯೇ?

ಶ್ರೀ ಇ.ಟಿ. ಶಂಭುನಾಥ್:– ಕಡಿಮೆ ಉತ್ಪಾದನೆ ಆಗಿಲ್ಲ, ಕೆಪಾಸಿಟಿಗೆ ತಕ್ಕಂತೆ ಉತ್ಪಾದಿಸಲಾಗಿದೆ. ಎರಡು ವರ್ಷದಲ್ಲಿ 31 ಸಾವಿರ ಲೀಟರನ್ನು ಉತ್ಪಾದಿಸಲಾಗಿದೆ.

ಶ್ರೀ ಪಿ. ಬಸವರಾಜ್:– ಈ ಫೆನ್ನಿಯನ್ನು ಮಾರಾಟ ಮಾಡದಿರುವುದಕ್ಕೆ ಕಾರಣ ಏನು? ಉತ್ಪಾದನೆ ಮಾಡಿದ್ದೀರಿ, ಆದರೆ ಸೇಲ್ ಆಗದೆ ಹಾಗೆಯೇ ಉಳಿದಿದೆ. ಅದೇ ರೀತಿಯಲ್ಲಿ ಇನ್ನೊಂದು ಪ್ರಶ್ನೆ, ಹಿಂದೆ ಮಾನ್ಯ ಸಚಿವರು ಆ ಕಾರ್ಖಾನೆಗೆ ಭೇಟಿ ನೀಡಿದ್ದಾಗ, ಅವರ ಜೊತೆಯಲ್ಲಿ ನಾನೂ ಇದ್ದೆ. ಅಲ್ಲಿ ಏನು ಉತ್ಪಾದನೆ ಮಾಡಿದ್ದಾರೆ, ಅದರ ಗುಣಮಟ್ಟ ಚೆನ್ನಾಗಿಲ್ಲವೆಂದು ಮಾನ್ಯ ಸಚಿವರೇ ಹೇಳಿದ್ದಾರೆ. ಹಾಗಾಗಿ ಗುಣಮಟ್ಟವನ್ನು ಹೆಚ್ಚಿಸುವುದಕ್ಕೆ ಏನು ಕಾರ್ಯಕ್ರಮ ಹಾಕಿಕೊಂಡಿದ್ದೀರಿ? ಮತ್ತೆ ಅದರ ಸೇಲ್ ಮಾಡುವುದಕ್ಕೆ ಯಾವ ರೀತಿಯ ಕಾರ್ಯಕ್ರಮ ಹಾಕಿದ್ದೀರಿ? ಏಕೆಂದರೆ ಸುಮಾರು 48 ಲಕ್ಷ ವ್ಯಯ ಮಾಡಿ, ಇದನ್ನು ಹಾಗೆಯೇ ಬಿಡುವುದರಲ್ಲಿ ಅರ್ಥವಿಲ್ಲ. ಆದ್ದರಿಂದ ಯಾವ ಕಾರ್ಯಕ್ರಮ ಹಾಕಿದ್ದೀರಿ ಎಂಬುದನ್ನು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಕೇಳುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ:– ಮಾನ್ಯ ಅಧ್ಯಕ್ಷರೇ, ಗೇರು ಅಭಿವೃದ್ಧಿ ನಿಗಮದ ಫ್ಯಾಕ್ಟರಿ ಏನಿದೆ ಇದನ್ನು ನಾನು ತನಿಖೆ ಮಾಡಿದ್ದೇನೆ. ಇದರ ಬಗ್ಗೆ ನಾನು ಆಳವಾಗಿ ಅಭ್ಯಾಸ ಮಾಡಿದ್ದೇನೆ. ಅಭ್ಯಾಸ ಮಾಡಿ, 48–49 ಲಕ್ಷ ಖರ್ಚು ಮಾಡಿದ್ದೇವೆ; ಫೆನ್ನಿ ತಯಾರು ಮಾಡುತ್ತಾರೆ. ವರ್ಷದಲ್ಲಿ 365 ದಿವಸದಲ್ಲಿ 78 ದಿವಸ ಮಾತ್ರ ಈ ಫ್ಯಾಕ್ಟರಿ ಕೆಲಸ ಮಾಡುವುದಕ್ಕೆ ಅವಕಾಶ ಉಂಟು, 2–3 ವರ್ಷದಲ್ಲಿ ಈ ಫೆನ್ನಿ ತಯಾರು ಮಾಡಿದ್ದಾರೆ. ಅದಕ್ಕೆ ಬ್ಲೆಂಡಿಂಗ್ ಪ್ರೋಸೆಸ್ ಇಲ್ಲದೆ ಈ ರೀತಿ ತಯಾರು ಮಾಡಿ ಸ್ಟಾಕ್ ಇಟ್ಟಿದ್ದಾರೆ. ಮಾರಾಟ ಮಾಡಿ ಎಂದು ಹೇಳಿದ್ದೆ; ಮಾರಾಟ ಮಾಡುವುದಕ್ಕೆ ಆಗಿಲ್ಲ ಮಾರ್ಕೆಟ್‌ನಲ್ಲಿ ಅವಶ್ಯಕತೆ ಇದೆಯೋ, ಬೇಡಿಕೆ ಇದೆಯೋ ಅದು ನನ್ನ ಗಮನದಲ್ಲಿ ಇಲ್ಲ. ನಾನು ಅದನ್ನು ನೋಡಿದ್ದೇನೆ. ನಾನು ಅದನ್ನು ಕುಡಿದೆ, ನೀರು ಕುಡಿದ ಹಾಗಾಯಿತು ಬ್ಲೆಂಡಿಂಗ್ Process ಇಲ್ಲದೆ ಯಾರು ಮಾಡಿ, ಶೀಷೆಯಲ್ಲಿ ತುಂಬಿಟ್ಟಿದ್ದಾರೆ, ಇದರ ಬಗ್ಗೆ ಏನು ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಯೋಚನೆ

ಮಾಡುತ್ತಿದ್ದೇವೆ. ಪುನ: ಇದನ್ನು ತಯಾರು ಮಾಡುವಂತಹ ಪ್ರಶ್ನೆ ಇಲ್ಲ expertise knowledge ನಮ್ಮ ಹತ್ತಿರ ಇಲ್ಲ. ಫಾರೆಸ್ಟ್ ಡಿಪಾರ್ಟ್‌ಮೆಂಟ್‌ನಲ್ಲಿ Fenny ಎಂದು ಈ ಲಿಕ್ಕರ್‌ಗೆ ಹೆಸರು ಕೊಟ್ಟಿದ್ದಾರೆ. ಮಾರ್ಕೆಟ್‌ನಲ್ಲಿ ಇದಕ್ಕೆ ಬೇಡಿಕೆ ಇದ್ದಹಾಗೆ ಕಾಣುವುದಿಲ್ಲ. ಆಡ್ವರ್‌ಟೈಸ್ ಮಾಡಿದ್ದೇವೆ, ಯಾರಾದರೂ ತೆಗೆದುಕೊಳ್ಳುವುದಾದರೆ ನಾವು ಕೊಟ್ಟುಬಿಡುತ್ತೇವೆ. ನಾವೇ ಮಾಡಬೇಕೆಂಬ ಇಚ್ಛೆ ಇಲ್ಲ ಇಷ್ಟು ಇನ್‌ವೆಸ್ಟ್ ಮಾಡಿದ್ದಾರೆ ಇದಕ್ಕೆ ಸರ್ಕಾರದಿಂದ ಮನ್ನಣೆ 25 ಲಕ್ಷ ಸಿಕ್ಕಿದ್ದರೂ ಕೂಡ, 48 ಲಕ್ಷ ಖರ್ಚು ಮಾಡಿದ್ದಾರೆ. ಖರ್ಚು ಮಾಡಿ ತಯಾರು ಮಾಡಿದ್ದಾರೆ. ಈ ಫೆನ್ನಿ ತಯಾರು ಮಾಡಿದಮೇಲೆ ಮಾರಾಟ ಮಾಡಬೇಕು. ಆದರೆ ಮಾರಾಟ ಮಾಡಿಲ್ಲ ಅದಕ್ಕೆ ಪ್ರಯತ್ನ ಮಾಡಿಲ್ಲ ಇದರ ಬಗ್ಗೆ ತೀವ್ರವಾಗಿ ತನಿಖೆ ಮಾಡಬೇಕೆಂದು ಆರ್ಡರ್ ಮಾಡಿದ್ದೆ. ಇದರ ಬಗ್ಗೆ ಸರ್ಕಾರ ಗಮನಕೊಡುತ್ತದೆ.

ಶ್ರೀ ಪಿ. ಬಸವರಾಜ್– ಈ ಕಾರ್ಖಾನೆಗೆ ಗೇರು ಹಣ್ಣನ್ನು ತೆಗೆದುಕೊಳ್ಳುತ್ತಾರೆ. ಗೇರು ಹಣ್ಣಿನಿಂದ ಫೆನ್ನಿ ತಯಾರು ಮಾಡುತ್ತಾರೆ. ಈ ಗೇರು ಹಣ್ಣನ್ನು ಸರ್ಕಾರಿ ಉದ್ಯಮಕ್ಕೆ ಕೊಡದೇ ಖಾಸಗೀಯವರಿಗೆ ಮಾರಾಟ ಮಾಡುತ್ತಾರೆ. ಆದ್ದರಿಂದ ಇದನ್ನು ತಡೆಗಟ್ಟಲು ಸರ್ಕಾರ ಏನು ಕಾರ್ಯಕ್ರಮ ಹಾಕಿದ್ದಾರೆಂದು ಕೇಳುತ್ತೇನೆ.

ಶ್ರೀ ಇ.ಟಿ. ಶಂಭುನಾಥ್:– ಇದನ್ನು ತಡೆಗಟ್ಟುವುದಕ್ಕೆ ಸರ್ಕಾರ ಕಾರ್ಯಕ್ರಮ ಹಾಕಿಕೊಂಡಿದೆ. ಆದರೆ ಮಾನ್ಯ ಸಚಿವರು ಹೇಳಿದಂತೆ ಉತ್ಪಾದನೆ ಮಾಡುವುದನ್ನು ನಿಲ್ಲಿಸಬೇಕೆಂಬ ಉದ್ದೇಶ ಇರುವಾಗ, ತಡೆಗಟ್ಟುವುದನ್ನು ಆಲೋಚಿಸಬೇಕಾಗುತ್ತದೆ.

ಶ್ರೀ ಆರ್.ವಿ. ದೇಶಪಾಂಡೆ:– ಮಾನ್ಯ ಹಿರಿಯ ಸಚಿವರಾದ ಬಸವಲಿಂಗಪ್ಪನವರು ಹೇಳಿದರು, ಅದರ ರುಚಿ ನೋಡಿದ್ದೇನೆ ಎಂದು ಮತ್ತು ಈಗಾಗಲೇ ಮಾನ್ಯುಫ್ಯಾಕ್ಚರ್ ಬಂದ್ ಮಾಡುವ ವಿಚಾರ ಇದೆ ಎಂದು ಆದರೆ, ನನ್ನ ದೃಷ್ಟಿಯಲ್ಲಿ ಬಂದ್ ಮಾಡುವುದು ಬಿಡುವುದು ಸರ್ಕಾರಕ್ಕೆ ಬಿಟ್ಟ ವಿಷಯ. ಇದನ್ನು ಮಾಡುವುದಕ್ಕಿಂತ ಮುಂಚೆ ಎರಡು ವಿಷಯ ಗಮನದಲ್ಲಿಟ್ಟುಕೊಳ್ಳಬೇಕು. ಒಂದು ಎಂದರೆ, ಏನು ಮಾನ್ಯಫ್ಯಾಕ್ಚರ್ ಆಗುತ್ತಿದೆ ಅದರ ಗುಣಮಟ್ಟ ಸರಿಯಿಲ್ಲ ಎರಡನೆಯದು ಕಾಸ್ಟ್ ಆಫ್ ಪ್ರೊಡಕ್ಷನ್ ಜಾಸ್ತಿಯಾಗಿದೆ. ನಮ್ಮ ಕಡೆ ಸಾಕಷ್ಟು ಎಕ್ಸೈಜ್ ಡ್ಯೂಟಿ ಇದೆ ಇದರ ಕಾಸ್ಟ್ ಆಫ್ ಪ್ರೊಡಕ್ಷನ್ ಹೆಚ್ಚು ಇದೆ. ಮತ್ತು ಗೋವಾದಿಂದ ಈ ಫೆನ್ನಿ ಏನು ಸ್ಮಗಲ್ ಆಗುತ್ತಿದೆ. ಅದರ ಕ್ವಾಲಿಟಿ ಸಹ ಒಳ್ಳೆಯದು ಇದೆ. ಇದರ ರೇಟ್ ಕೂಡ ಚೀಪ್ ಇದೆ. ಈ ಕೈಗಾರಿಕೆಗಳು ಸರಿಯಾಗಿ ನಡೆಯುತ್ತಿಲ್ಲ. ಕಾರಣ ಇದರ ಕಾಸ್ಟ್ ಆಫ್ ಪ್ರೊಡಕ್ಷನ್ ಕಡಿಮೆ ಮಾಡುವುದಕ್ಕೆ ಹಾಗೂ ಗುಣ ಮಟ್ಟ ಜಾಸ್ತಿ ಮಾಡುವುದಕ್ಕೆ ಪ್ರಯತ್ನ ಮಾಡಬೇಕು ಮತ್ತು ಗೋವಾ ಕೋಸ್ಟಲ್ ಏರಿಯಾದಿಂದ ಬರತಕ್ಕಂಥ ಫೆನ್ನಿಯನ್ನು ನಿಲ್ಲಿಸುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡಬೇಕಾಗುತ್ತದೆ. ಇಲ್ಲದಿದ್ದರೆ ಇದು ಸಾಧ್ಯವಾಗುವುದಿಲ್ಲ.

ಶ್ರೀ ಬಿ. ಬಸವಲಿಂಗಪ್ಪ:– ಸರ್ಕಾರದ ನೀತಿ ಲಿಕ್ಕರ್ ತಯಾರು ಮಾಡತಕ್ಕಂಥಾದ್ದು ಅಲ್ಲ. ಸರ್ಕಾರದ ನೀತಿ ಪ್ರಕಾರ ಈ ಲಿಕ್ಕರ್ ತಯಾರು ಮಾಡುವುದು ತಪ್ಪು. ಈ ನೀತಿ ಸಾರ್ವಜನಿಕ....

ಶ್ರೀ ಆರ್. ವಿ. ದೇಶಪಾಂಡೆ :– ತಾವು ಫೆನ್ನಿ ಬಗ್ಗೆ ಹೇಳಿ ಇಡೀ ರಾಜ್ಯದಲ್ಲಿ ಮತ್ತೆ ಲಿಕ್ಕರ್ ತಯಾರ್ ಮಾಡುವುದಕ್ಕೆ ಕಾರ್ಯಕ್ರಮ ತೆಗೆದುಕೊಳ್ಳುತ್ತೀದ್ದೀರಿ.....

ಶ್ರೀ ಬಿ. ಬಸವಲಿಂಗಪ್ಪ:– ಮಾನ್ಯ ಅಧ್ಯಕ್ಷರೇ, ಗೋವಾದಿಂದ ಬರತಕ್ಕಂಥ ಫೆನ್ನಿ ಇಲ್ಲಿ ತಯಾರು ಮಾಡತಕ್ಕಂಥ ಫೆನ್ನಿಗೆ ಸಮಾನ ಇಲ್ಲ. ಕಾರಣ ಇಲ್ಲಿ ಇವರು ಎಕ್ಸ್‌ಪರ್ಟ್ ನಾಲೆಡ್ಜ್

ಇರತಕ್ಕಂಥ ಜನರನ್ನು ಅಪಾಯಿಂಟ್ ಮಾಡಿಕೊಳ್ಳದೆ ಏನೋ ಅವರೇ ಸೇರಿಕೊಂಡು ತಯಾರು ಮಾಡಿಟ್ಟಿದ್ದಾರೆ. ಲಿಕ್ಕರ್‌ಗೆ ಸಾರಾಯಿಗೆ ವ್ಯತ್ಯಾಸ ಇರುವುದಿಲ್ಲವೇ? ಸರ್ಕಾರ ಇದನ್ನು ಪರಿಶೀಲನೆ ಮಾಡುತ್ತದೆ.

ಶ್ರೀ ಡಿ. ಬಿ. ಚಂದ್ರೇಗೌಡ:– ಈಗ ಮಾನ್ಯ ಮಂತ್ರಿಗಳು ಇದರ ಉತ್ಪಾದನೆ ಬಗ್ಗೆ ಮತ್ತು ಹಿಂದಿನ ಚರಿತ್ರೆ ಬಗ್ಗೆ ಹೇಳಿದ್ದಾರೆ. ಖಾಸಗೀಯವರು ಯಾರಾದರೂ ಗೇರು ಬೀಜ ಉಪಯೋಗಿಸಿ ಫೆನ್ನಿ ತಯಾರು ಮಾಡುತ್ತಿದ್ದಾರೆಯೇ? ಒಂದು ವೇಳೆ ತಯಾರು ಮಾಡುತ್ತಿದ್ದರೆ ಅವರ ಉದ್ದಿಮೆ ಯಾವ ರೀತಿಯಲ್ಲಿ ನಡೆಯುತ್ತಿದೆ? ಆ ಮಾಹಿತಿ ಇದ್ದರೆ ಹೇಳಿ. ಒಂದು ವೇಳೆ ಖಾಸಗಿಯವರು ಯಾರಾದರೂ ಮುಂದೆ ಬಂದರೆ ಈ ಫ್ಯಾಕ್ಟರಿಯನ್ನು ಅವರಿಗೆ ಮಹಿಸಿಕೊಡಲು ಸರ್ಕಾರದವರು ಪ್ರಯತ್ನ ಮಾಡುತ್ತಾರೆಯೇ?

ಶ್ರೀ ಬಿ. ಬಸವಲಿಂಗಪ್ಪ:– ಒಳ್ಳೆಯ ಸಲಹೆ ಪರಿಶೀಲನೆ ಮಾಡುತ್ತೇನೆ.

ಅಧ್ಯಕ್ಷರು:– ಪ್ರಶ್ನೆ ಸಂಖ್ಯೆ 98(598) ಲೋಕೋಪಯೋಗಿ ಇಲಾಖೆಗೆ ವರ್ಗ ಮಾಡಲಾಗಿದೆ, ಪ್ರಶ್ನೆ ಸಂಖ್ಯೆ: 99(288)ಕ್ಕೆ ಕಾಲಾವಕಾಶ ಕೇಳಲಾಗಿದೆ.

ದಾಸನಪುರ ಹೋಬಳಿಯಲ್ಲಿ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಖರ್ಚಾಗಿರುವ ಹಣ

324. ಶ್ರೀ ಎ.ಕೆ. ಅನಂತ ಕೃಷ್ಣ ಶ್ರೀ ಅಂಜನಮೂರ್ತಿ(ನೆಲಮಂಗಲ) ಇವರ ಪರವಾಗಿ (ಶ್ರೀ ಎ.ಕೆ. ಅನಂತ ಕೃಷ್ಣ) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಪಶುಸಂಗೋಪನಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1983–84 ರಿಂದ 1989 ರವರೆಗೆ ಬೆಂಗಳೂರು ಉತ್ತರ ತಾಲ್ಲೂಕು ದಾಸನಪುರ ಹೋಬಳಿಯ ಅಭಿವೃದ್ಧಿಯ ಕಾರ್ಯಕ್ರಮಗಳಿಗೆ ಖರ್ಚಾಗಿರುವ ಹಣವೆಷ್ಟು ? (ಗ್ರಾಮವಾರು ಮಾಹಿತಿ ನೀಡುವುದು).

ಆ) ಹೋಬಳಿಯಲ್ಲಿ ಎಷ್ಟು ಕಿಲೋಮೀಟರ್ ಉದ್ದದ ಡಾಂಬರ್ ರಸ್ತೆಯನ್ನು ಮೇಲ್ಕಂಡ ಇಸವಿಯವರೆಗೆ ಮಾಡಲಾಗಿದೆ?

ಇ) ಮೇಲ್ಕಂಡ ಇಸವಿಯಲ್ಲಿ ಕುಡಿಯುವ ನೀರಿನ ಸೌಲಭ್ಯಕ್ಕೆ ಖರ್ಚಾದ ಹಣವೆಷ್ಟು ?

ಶ್ರೀ ಬಿ. ಬಸವಲಿಂಗಪ್ಪ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಮಂತ್ರಿಗಳು):–

ಅ) ದಾಸನಪುರ ಹೋಬಳಿಯು ಬೆಂಗಳೂರು (ನಗರ) ಜಿಲ್ಲೆಗೆ ದಿನಾಂಕ: 1–8–1986 ರಿಂದ ಸೇರಿದ್ದು ಮಾಹಿತಿಯನ್ನು 1–8–1986ರ ನಂತರದ ಅವಧಿಗೆ ನೀಡಲಾಗಿದೆ.

ದಿನಾಂಕ 1–8–1986 ರಿಂದ ಈ ತಹಲ್‌ವರೆವಿಗೂ ರೂ. 46.99 ಲಕ್ಷ ರೂಪಾಯಿಗಳು ಅಭಿವೃದ್ಧಿಯ ಕಾರ್ಯಕ್ರಮಗಳಿಗೆ ಖರ್ಚು ಆಗಿರುತ್ತದೆ. ಗ್ರಾಮವಾರು ಮಾಹಿತಿಯನ್ನು ನೀಡಲಾಗಿದೆ.

ಆ) ಡಾಂಬರು ರಸ್ತೆಯ ಉದ್ದ 8.86 ಕಿಲೋಮೀಟರ್‌ಗಳು, ಆದ ಖರ್ಚು ರೂ. 9.71 ಲಕ್ಷ

ಇ) ಆದ ಖರ್ಚು ರೂ. 7.70 ಲಕ್ಷ ಕಾಮಗಾರಿಗಳ ಸಂಖ್ಯೆ 18.